

**ಅಕ್ಷತಾ ಹುಂಚದಕಟ್ಟೆ**
ಕಲೆ: ರೂಪಶ್ರೀ ಕಲ್ಲಿಗನೂರು



# ನಲವತ್ತೈದರ ಅಂಚು

ಮನೆಯೊಳಗಿನ ಮೂರ್‍ನಾಕು ಜೀವಗಳ ದೇಖರೇಖಿಯಾಚೆಗೆ
ಅನಿವಾರ್ಯತೆಗೆ ಅಂಟಿಕೊಂಡ ರಕ್ತಸಂಬಂಧದ ತೋರುಗಾಣಿಕೆ ಈಚೆಗೆ
ಕಿಟಕಿಬಾಗಿಲ ಸಂಧಿಗೊಂಧಿಯ ಬಿಡದೇ ಫಳಫಳಿಸುವ
ಕಸರತ್ತಿನ ನಿತ್ಯಕರ್ಮದ ಚಕ್ರವ್ಯೂಹದ ಮಧ್ಯದಿ
ತುಸುವೆಂದರೆ ತುಸುವೇ
ತುಸುವೆನ್ನದಿದ್ದರೂ ತುಸುವೇ
ಸಾರ್ವಜನಿಕ ಸ್ವರುಷ ದೊರೆತರೆ
ಹಾಗೊಂದು ಸಂಪರ್ಕ ಅವಳು ಇವಳನು ಬೆಸೆದರೆ
ಅವಳೇ ಇವಳು ಇವಳೇ ಅವಳಾಗಿ
ಊಟಕ್ಕಿರಲಿ ಐವತ್ತಕ್ಕಿಂತ ಅಧಿಕ ಮಂದಿ
ಕ್ಷಣಾರ್ಧದಲಿ ಮಾಡಿ ಬಡಿಸಿಯೇ ಬಿಡುವರು
ಮಸ್ಲೊಪ್ಪು ಮುದ್ದೆ, ಕೋಳಿತಾಳು ಇಡ್ಡಲಿ
ತಮಗೇನು ಅನಿಸುವುದೋ ಸ್ನೇಹಕೂಟದಲಿ
ನಿರಾಳವಾಗಿ ಬಿಡಿಸಿಟ್ಟು ನಗುತ್ತಾ ಚಿತ್ತಾರದ ಕೌದಿಗಳ ಹೊಲೆವರು
ಘನಪೋಲಿ ಜೋಕುಗಳು ಕೂಡಾ
ಇವರ ಇರುವಿಕೆಯಲ್ಲಿ ಅಸ್ತಿತ್ವ ಕಾಪಾಡಿಕೊಂಡು
ಆರೋಗ್ಯಕರ ವಾತಾವರಣ ಸೃಷ್ಟಿಸುವವು
ಇವರ ಮಾತಿನ ಸರಕೋ ಮುಗಿಯದ ಖಜಾನೆ
ಹೆಣ್ಣು ಗಂಡಿನ ಒಲವು ವಿರಹ ಎಲ್ಲವೂ
ಇದೆ ಇಲ್ಲೆ ಎಲ್ಲೋ... ಒಳಗೊ ಹೊರಗೋ
ಅರಳಿಕೊಳ್ಳಲಿ ಮನಸು ನಗುತಿರಲಿ ಬದುಕು ಎಂಬ ಉದಾರತೆ
ಜಾತಿ ಧರುಮದ ಕಂದರದಾಚೆ ಅವರವರೇ ಒಂದಾಗಿ
ಬಿಚ್ಚಿಕೊಳ್ಳುವರು ತಮ್ಮೊಳಗನ್ನು;
ಒಬ್ಬರಿದ್ದಾಗ ಲಂಗ ಸರಿಸಲು ಕತ್ತಲ ಹುಡುಕುತ್ತಿದ್ದವರು
ಗುಂಪಿನಲಿ ಸರಸರ ಕಳಚಿ ಭರಭರ ಉಡುವರು ನಿರಾಳದಲಿ

ಇಪ್ಪತ್ತರ ಹರೆಯದಲ್ಲಂತೂ ಸೈಯೇ ಸೈ
ನಲವತ್ತೈದರ ಅಂಚಿನಲ್ಲಾದರೂ ಸೈ ತುಸು ಸಾರ್ವಜನಿಕ ಸ್ವರುಷ
ಸಿಕ್ಕಿದರೆ ಸಾಕು ಚಿಗುರಿಸಿಕೊಳ್ಳುವರು ತಮ್ಮೊಳಗನ್ನು

